# ಕರ್ನಾಟಕ ವಿಧಾನ ಪರಿಷತ್ತು

## 140ನೇ ಅಧಿವೇಶನ

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 41 (247)

ಮಾನ್ಯ ಸದಸ್ಯರ ಹೆಸರು : ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 04-03-2020

ಉತ್ತರಿಸುವ ಸಚಿವರು : ಮಾನ್ಯ ಉಪಮುಖ್ಯಮಂತ್ರಿಗಳು,
(ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ)

| ಕ್ರ.ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಬೆಂಗಳೂರು ಮಾಗಡಿ ರಾಷ್ಟ್ರೀಯ ಹೆದ್ದಾರಿ 85ರಲ್ಲಿ ಚತುಷ್ಪಥ ರಸ್ತೆ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; | ಸರ್ಕಾರದ ಆದೇಶ ಸಂಖ್ಯೆ: ಲೋಇ 74 ಇಎಪಿ 2017, ದಿನಾಂಕ: 28-12-2017 ರಲ್ಲಿ ಒಟ್ಟು 418 ಕಿ.ಮೀ. ಉದ್ದದ ರಸ್ತೆಗಳನ್ನು ಎ.ಡಿ.ಬಿ. ಅನುದಾನಿತ ಕೆಶಿಪ್-3 ಯೋಜನೆಯಡಿಯಲ್ಲಿ ಅಭಿವೃದ್ಧಿ ಪಡಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br>• ಪ್ಯಾಕೇಜ್ 1ಸಿ ರಡಿಯಲ್ಲಿ 50.80 ಕಿಮೀ ಉದ್ದದ ಬೆಂಗಳೂರು ಮಾಗಡಿ ರಾಷ್ಟ್ರೀಯ ಹೆದ್ದಾರಿ 85ರಲ್ಲಿ ಚತುಷ್ಪಥ ರಸ್ತೆ ಕಾಮಗಾರಿಯು ಸೇರಿರುತ್ತದೆ.<br>• ರಿಯಾಯಿತಿ ಒಪ್ಪಂದವನ್ನು ಎಸ್.ಪಿ.ವಿ – ಮೆ: ಕೆ.ಎನ್.ಹೈವೇಸ್ ಡೆವಲಪ್‌ಮೆಂಟ್ ಲಿಮಿಟೆಡ್ ರವರೊಂದಿಗೆ 20.02.2019 ರಂದು ಸಹಿ ಮಾಡಲಾಗಿದೆ.<br>• ಸದರಿ ರಸ್ತೆಯ ಗುತ್ತಿಗೆ ಕರಾರಿನಂತೆ ಕೆಶಿಪ್‌ನಿಂದ ಪೂರ್ವಭಾವಿ ಸಿದ್ಧತೆಗಳಾದ ಭೂಸ್ವಾಧೀನ ಪ್ರಕ್ರಿಯೆ, ಅರಣ್ಯ ಇಲಾಖೆಯಿಂದ ಅನುಮತಿ ಪಡೆಯುವುದು, ಮರಗಳ ಕಟಾವಣೆ ಅನುಮತಿ ಮತ್ತು ಇತರೇ ಪೂರ್ವಭಾವಿ ಸಿದ್ಧತೆಗಳನ್ನು ಪೂರೈಸುವ ಹಂತದಲ್ಲಿದೆ. ಇದೇ ರೀತಿ ರಿಯಾಯತಿದಾರರಾದ ಮೆ: ಕೆಎನ್ ಹೈವೇಸ್ ರವರಿಂದ Financial Closure ಮತ್ತು ಇತರೇ ಪೂರ್ವಭಾವಿ ಸಿದ್ಧತೆಗಳನ್ನು ಪೂರೈಸಬೇಕಾಗಿದೆ.<br>ಗುತ್ತಿಗೆ ಕರಾರಿನಂತೆ ಕೆಶಿಪ್ ಮತ್ತು ಗುತ್ತಿಗೆದಾರರಿಂದ ಸದರಿ ಪೂರ್ವಭಾವಿ ಸಿದ್ಧತೆಗಳು ಮತ್ತು ಪರತ್ತು ಪೂರೈಸಿದ ನಂತರ ನೇಮಕ ದಿನಾಂಕವನ್ನು ಘೋಷಿಸಲಾಗುವುದು. ಪ್ರಸ್ತುತವಾಗಿ ರಸ್ತೆ ಕಾಮಗಾರಿಯು ಅಭಿವೃದ್ಧಿ ಅವಧಿಯಲ್ಲಿದೆ. ಈ ಸಿದ್ಧತೆಗಳು ಅಂತಿಮ ಹಂತದಲ್ಲಿದ್ದು, ಸಧ್ಯದಲ್ಲಿಯೇ ಕಾಮಗಾರಿ ಪ್ರಾರಂಭಿಸುವ ನಿರೀಕ್ಷೆಯಿದೆ. |

. . . . . 2

| | | |
|---|---|---|
| ಆ) | ಈ ರಸ್ತೆಯಲ್ಲಿ ಹಾದು ಹೋಗುವ ಚೋಳನಾಯಕನಹಳ್ಳಿ ಮತ್ತು ತಾವರೆಕೆರೆ ಗ್ರಾಮದಲ್ಲಿ ದ್ವಿಪಥರಸ್ತೆ ನಿರ್ಮಿಸಿದ್ದಲ್ಲಿ, ಈ ಗ್ರಾಮಗಳಲ್ಲಿ ಮೇಲ್ಸೇತುವೆ ನಿರ್ಮಾಣದ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ. | ಈ ರಸ್ತೆಯಲ್ಲಿ ಹಾದು ಹೋಗುವ ಚೋಳನಾಯಕನಹಳ್ಳಿ ಮತ್ತು ತಾವರೆಕೆರೆ ಗ್ರಾಮದಲ್ಲಿ ಚತುಷ್ಪಥ ರಸ್ತೆ ನಿರ್ಮಿಸುವ ಪ್ರಸ್ತಾವನೆ ಇರುತ್ತದೆ. ಮುಂದುವರೆದು, ತಾವರೇಕೆರೆ ಕ್ರಾಸಿಂಗ್ ಬಳಿ 270 ಮೀಟರ್ ಉದ್ದದ ಫ್ಲೈವ್ಓವರ್ ನಿರ್ಮಾಣವನ್ನು ಕೈಗೊಳ್ಳಲಾಗುವುದು. |
| ಇ) | ಈ ಕಾಮಗಾರಿ ಪೂರ್ಣಗೊಳ್ಳಲು ತಗಲುವ ಸಮಯಾವಕಾಶ ಎಷ್ಟು? | ಗುತ್ತಿಗೆ ಕರಾರಿನಂತೆ ಕಾಮಗಾರಿ ಪೂರ್ಣಗೊಳಿಸಲು 24 ತಿಂಗಳುಗಳ ಅವಧಿಯನ್ನು ನಿಗದಿಪಡಿಸಲಾಗಿದೆ. |

ಸಂಖ್ಯೆ:ಲೋಇ E-31 ಇಎಪಿ 2020

**(ಗೋವಿಂದ ಎಂ. ಕಾರಜೋಳ)**
ಮಾನ್ಯ ಉಪಮುಖ್ಯಮಂತ್ರಿಗಳು,
(ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)